| O.S 89/2016 | PW-1 |
|---|---|

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 03.06.2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು:– ಪ್ರತಿವಾದಿ ಪರ ವಕೀಲರಿಂದ:–**

ನನ್ನ ತಾತನ ಹೆಸರು ಸಿದ್ದಮಾದೇಗೌಡ ಎಂದರೆ ನಿಜ. ನನ್ನ ತಾತನಿಗೆ 8 ಜನ ಮಕ್ಕಳು ಎಂದರೆ ನಿಜ. 3 ಜನ ಹೆಣ್ಣುಮಕ್ಕಳು ಮತ್ತು 5 ಜನ ಗಂಡುಮಕ್ಕಳು ಎಂದರೆ ನಿಜ. ಗಂಡುಮಕ್ಕಳು ಮಾದೇಗೌಡ, ರಾಮೇಗೌಡ, ಪುಟ್ಟಬಸವೇಗೌಡ, ಕರಿಗೇಗೌಡ ಮತ್ತು ಮಹದೇವೇಗೌಡ ಹಾಗೂ ಹೆಣ್ಣುಮಕ್ಕಳಲ್ಲಿ ಮರಣಮ್ಮ, ಸಣ್ಣಮ್ಮ, ಕನ್ನಮ್ಮ ಎಂದರೆ ನಿಜ. ನನ್ನ ತಂದೆಯ ಹೆಸರು ಪುಟ್ಟಬಸವೇಗೌಡ ಎಂದರೆ ನಿಜ. ಕರಿಗೇಗೌಡ ಈ ದಾವೆಯ 1 ನೇ ವಾದಿ ಎಂದರೆ ನಿಜ. ಮಾದೇಗೌಡರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ನಿಜ. 3 ಜನ ಹೆಣ್ಣುಮಕ್ಕಳನ್ನು ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ನಿಜ.

ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ಅಂದಾಜು 33 ವರ್ಷಗಳ ಹಿಂದೆಯೇ ಆಸ್ತಿಗಳ ವಿಭಾಗ ಆಗಿರುತ್ತದೆ ಎಂದರೆ ನಿಜ. 1983 ನೇ ಸಾಲಿನಲ್ಲಿ ಆಸ್ತಿಗಳ ವಿಭಾಗ ಆಗಿರುತ್ತದೆ ಎಂದರೆ ನಿಜ. ನನ್ನ ತಂದೆಯ ಪಾಲಿಗೆ ಬಂದಂತಹ ಆಸ್ತಿ ನನ್ನ ತಂದೆ ಬದುಕಿದ್ದಾಗಲೇ ಖಾತೆ ಆಗಿರುತ್ತದೆ ಎಂದರೆ ಕೆಲವು ಆಸ್ತಿಗಳು ಮಾತ್ರ ಖಾತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳಿಗೆ ನನ್ನ ತಂದೆ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ನಿಜ. ನನ್ನ ತಂದೆ ಮೃತಪಟ್ಟ ನಂತರ ನನ್ನ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ ಎಂದರೆ ನಿಜ. 1 ನೇ ವಾದಿಯ ಪಾಲಿಗೆ ಬಂದಂತಹ ಆಸ್ತಿಗಳು ಅವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ನಿಜ.

ದಾವಾ ಆಸ್ತಿಯು ರಾಮೇಗೌಡರವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ನಿಜ. ರಾಮೇಗೌಡರವರು ಮೃತಪಟ್ಟಿರುತ್ತಾರೆ ಎಂದರೆ ನಿಜ. ಸದರಿಯವರು ಮೃತಪಟ್ಟ ನಂತರ ವಾರಸುದಾರರಾದ ಪ್ರತಿವಾದಿಗಳ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಆಸ್ತಿಯಲ್ಲಿ ನಮಗೆ ಭಾಗ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಭಾಗ ಬಂದ ನಂತರ ಸ್ವಾಧೀನದಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಮಗೆ ಪಾಲು ಬಂದಿರುತ್ತದೆ ಎಂದು

ತೋರಿಸಲು ಪಂಚಾಯಿತಿ ಅಸ್ಸೆಂಟ್ ದಾಖಲಾತಿ ಇರುತ್ತದೆ ಸದರಿ ದಾಖಲಾತಿಯನ್ನು ಹೊರತುಪಡಿಸಿ ಬೇರೆ ದಾಖಲಾತಿ ಇರುವುದಿಲ್ಲ. ದಾವಾ ಆಸ್ತಿಯು ಜಮೀನು ಎಂದರೆ ನಿಜ. ದಾವಾ ಆಸ್ತಿಯು ನಮ್ಮ ಪಾಲಿಗೆ ಬಂದ ನಂತರ ಖಾತೆ ಆಗಿರುವುದಿಲ್ಲ.

ಪ್ರತಿವಾದಿಗಳ ತಂದೆ ರಾಮೇಗೌಡ **2013** ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ ಎಂದರೆ ನಿಜ. ರಾಮೇಗೌಡರವರು ಮೃತಪಟ್ಟ ಕಾಲಕ್ಕೆ ವಿಭಾಗವಾಗಿ ಸುಮಾರು **30** ವರ್ಷವಾಗಿರುತ್ತದೆ ಎಂದರೆ ನಿಜ. ರಾಮೇಗೌಡರವರು ಬದುಕಿರುವಾಗ ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಳ್ಳಲು ತೊಂದರೆ ಇತ್ತೇ ಎಂದರೆ ಹೌದು ಸಾಕ್ಷಿಯು ಮುಂದುವರೆದು ರಾಮೇಗೌಡರವರು ಖಾತೆ ಮಾಡಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ರಾಮೇಗೌಡರವರು ಬದುಕಿದ್ದಾಗ ನಮಗೆ ಖಾತೆ ಮಾಡಿಕೊಡಲು ನಿರಾಕರಿಸಿದ ಕಾರಣ ನಾವು ಯಾವುದೇ ಕ್ರಮ ಅವರ ವಿರುದ್ಧ ತೆಗೆದುಕೊಂಡಿರುವುದಿಲ್ಲ. ಸದರಿ ರಾಮೇಗೌಡರವರು ಮೃತಪಟ್ಟ ನಂತರ ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ನಿಜ.

ದಾವಾ ಆಸ್ತಿಯಲ್ಲಿ ನಮಗೆ ಪಾಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಪಾಲು ಬಂದಿದ್ದರೆ ರಾಮೇಗೌಡ ಜೀವಿತಾವಧಿಯಲ್ಲೆ ಖಾತೆ ಆಗಿರುತ್ತಿತ್ತು ಎಂದರೆ ಸಾಕ್ಷಿಯು ಅವರು ಮಾಡಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಪಾಲು ಬಂದಿರುವುದಿಲ್ಲ ಆದ್ದರಿಂದ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗಳಿಗೆ ಯಾವುದೇ ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಡಿ- 15−20 ಫೋಟೋಗಳನ್ನು ತೋರಿಸಿದ್ದು ಸದರಿ ಫೋಟೋಗಳಲ್ಲಿ ಕಾಣಿಸುತ್ತಿರುವ ಮನೆಗಳು ಪ್ರತಿವಾದಿಗಳಿಗೆ ಸೇರಿರುತ್ತದೆ ಎಂದರೆ ಸಾಕ್ಷಿಯು ನಮಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಇರುವ ಮನೆಗಳು ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ವಿದ್ಯುತ್ ರಶೀದಿಗಳು ದಾವಾ ಆಸ್ತಿಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕ 27.03.2008 ರಲ್ಲಿ ರಾಮೇಗೌಡರವರು ರಂಗಶೆಟ್ಟಿರವರಿಗೆ 10 ಗುಂಟೆ ಆಸ್ತಿಯನ್ನು ಕ್ರಯ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಭಾಗಾಂಶದ ಆಸ್ತಿಯನ್ನು ಕ್ರಯ ಮಾಡಿರುತ್ತಾರೆ ಎಂದು ನುಡಿಯುತ್ತಾರೆ ಇನ್ನುಳಿದ ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ

ಪ್ರತಿವಾದಿಗಳು ರೇಶ್ಮೆ ಕಾರ್ಖಾನೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನಾವು ಮತ್ತು ಅವರು ನಮ್ಮ ನಮ್ಮ ಪಾಲಿಗೆ ಬಂದಂತಹ ಆಸ್ತಿಯಲ್ಲಿ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ರೇಶ್ಮೆ ಕಾರ್ಖಾನೆ ನಡೆಸಲು ಪ್ರತಿವಾದಿಗಳು ಪರವಾನಗಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನಿಜ. ರೇಶ್ಮೆ ಕಾರ್ಖಾನೆ ಮುಚ್ಚಿದ ನಂತರ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಆಲೆಮನೆಯನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನಾವು ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ ಆಲೆಮನೆಯನ್ನು ನಡೆಸಲು ಸಹ ಪ್ರತಿವಾದಿಗಳು ಪರವಾನಗಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನಿಜ. ನಾವು ಪರವಾನಗಿಯನ್ನು ತೆಗೆದುಕೊಂಡಿರುತ್ತೇವೆ. ಸದರಿ ಪರವಾನಗಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇವೆ.

ನಮಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಹೆಣ್ಣುಮಕ್ಕಳಾಗಿದ್ದು ಅವರು ಗಂಡನ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳಿಗೆ ದಾವಾ ಆಸ್ತಿಯನ್ನು ನಮಗೆ ಬರೆದುಕೊಡಿ ಎಂದು ಕೇಳಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿಗಳು ನಮ್ಮ ಹೆಸರಿಗೆ ಕ್ರಯಪತ್ರ ಬರೆದುಕೊಡಲು ಒಪ್ಪಿರುವುದಿಲ್ಲ ಎಂದರೆ ಸರಿಯಲ್ಲ. ಆ ದ್ವೇಷದಿಂದ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದಿನ ಮುಖ್ಯ ವಿಚಾರಣೆಗೆ ಸಮಯಾವಕಶವನ್ನು ಕೋರಿದ್ದರಿಂದ ಆಲಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.